ಓ.ಎಸ್. ನಂಃ 380/2022

ಪಿ. ಡಬ್ಲ್ಯೂಃ 1

**ದಿನಾಂಕ 09.01.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯ ಪರ ಃ ಶ್ರೀ.ಪಿ.ಡಿ. ವಕೀಲರಿಂದಃ**

1. ದಾವಾ ಆಸ್ತಿಯನ್ನು ಪುರಸಭೆಯಿಂದ ನನ್ನ ಗಂಡ ಖರೀದಿಸಿದ್ದು, ಅವರ ಮರಣದ ನಂತರ ದಾವಾ ಆಸ್ತಿಯು ನನ್ನ ಹೆಸರಿಗೆ ಪೌತಿ ಖಾತೆ ಆಗಿರುತ್ತದೆ. ದಾವಾ ಆಸ್ತಿಯು ಸರ್ವೇ ನಂಬರ್ 119/1 ರಲ್ಲಿ ಇರುತ್ತದೆ. ಸರ್ವೇ ನಂಬರ್ 119/1 ರಲ್ಲಿ ದಾವಾ ನಿವೇಶನವನ್ನು ರಚಿಸುವ ಪೂರ್ವದಲ್ಲಿ ಪುರಸಭೆಯವರು ಸರ್ವೇ ನಂಬರ್ 119/1 ರ ಜಮೀನನ್ನು ಸರ್ವೇ ಮಾಡಿಸಿದ ದಾಖಲೆಗಳನ್ನು ನನ್ನ ಗಂಡ ಪಡೆದಿದ್ದು, ಅವುಗಳನ್ನು ನಾನು ನನ್ನ ವಕೀಲರಿಗೆ ಕೊಟ್ಟಿರುತ್ತೇನೆ. ಸದರಿ ದಾಖಲೆಗಳನ್ನು ನನ್ನ ವಕೀಲರು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ.

2. ಸರ್ವೇ ನಂಬರ್ 119/1 ರಲ್ಲಿ 14 ಗುಂಟೆ ಜಮೀನು ಹಾರಂಗಿ ನಾಲೆಗೆ ಭೂ-ಸ್ವಾಧೀನವಾದ ಬಗ್ಗೆ ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯ ಪಕ್ಕದಲ್ಲಿಯೇ ಹಾರಂಗಿ ನಾಲೆ ಹಾದು ಹೋಗಿರುತ್ತದೆ ಎಂದು ಸ್ವತಃ ನುಡಿದಿರುತ್ತಾರೆ. ಸರ್ವೇ ನಂಬರ್ 119/1 ರಲ್ಲಿ ಪುರಸಭೆಯವರು ನಿವೇಶನಗಳನ್ನು ಮಾರಾಟ ಮಾಡುವ ಪೂರ್ವದಲ್ಲಿಯೇ ಸರ್ವೇ ನಂಬರ್ 119/1 ರಲ್ಲಿ 14 ಗುಂಟೆ ಜಮೀನು ಹಾರಂಗಿ ನಾಲೆಗೆ ಭೂ-ಸ್ವಾಧೀನವಾಗಿತ್ತು.

3. ಹಾರಂಗಿ ನಾಲೆಗೆ ಭೂ-ಸ್ವಾಧೀನವಾಗಿದ್ದ ಸದರಿ 14 ಗುಂಟೆ ಜಮೀನನ್ನು ಕಳೆದು ನಂತರದಲ್ಲಿ ಪುರಸಭೆಯವರು ನಿವೇಶನಗಳನ್ನು ರಚಿಸಿರುತ್ತಾರೆ. ಸರ್ವೇ ನಂಬರ್

119/1 ರಲ್ಲಿ ಪುರಸಭೆಯವರು ನಿವೇಶನಗಳನ್ನು ರಚಿಸುವ ಪೂರ್ವದಲ್ಲಿ ಮಾಡಿದ ಲೇ-ಔಟ್ ಪ್ಲಾನ್ ಮತ್ತು ಸರ್ವೇ ನಂಬರ್ 119/1 ರಲ್ಲಿ ರಚನೆ ಆದ ನಿವೇಶನಗಳ ಫಲಾನುಭಾವಿಗಳ ಪಟ್ಟಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ಗಂಡ ಬ್ಲಾಕ್ ಹೆಲ್ತ್ ಆಫೀಸರ್ ಹುದ್ದೆಯಲ್ಲಿ ಇದ್ದರು.

4. ನಿವೇಶನಗಳನ್ನು ರಚಿಸುವ ಉದ್ದೇಶದಿಂದ ಪುರಸಭೆಯವರು ಖರೀದಿಸಿದ್ದ ಸರ್ವೇ ನಂಬರ್ 119/1 ರ ಕ್ರಯ ಪತ್ರವನ್ನು ನಾನು ನೋಡಿರುವುದಿಲ್ಲ. ಆರ್ಥಿಕವಾಗಿ ಹಿಂದುಳಿದ ದುರ್ಬಲ ವರ್ಗದವರಿಗೆ ನಿವೇಶನಗಳನ್ನು ರಚನೆ ಮಾಡುವ ಉದ್ದೇಶದಿಂದ ಸರ್ವೇ ನಂಬರ್ 119/1 ರ ಆಸ್ತಿಯನ್ನು ಖರೀದಿಸಲಾಗುತ್ತಿದೆ ಎಂದು ಪುರಸಭೆಯವರು ಖರೀದಿಸಿದ್ದ ಸರ್ವೇ ನಂಬರ್ 119/1 ರ ಕ್ರಯ ಪತ್ರದಲ್ಲಿ ನಮೂದಿಸಿರುತ್ತಾರೆ ಎಂದರೆ ಸರಿ.

5. ಸರ್ವೇ ನಂಬರ್ 119/1 ರ ಆಸ್ತಿಯನ್ನು ಹೊರತುಪಡಿಸಿ ಸರ್ವೇ ನಂಬರ್ 119/2 ರ ಆಸ್ತಿಯ ಮೇಲೆ ಪುರಸಭೆಯವರಿಗೆ ಯಾವುದೇ ಹಕ್ಕು ಮತ್ತು ಅಧಿಕಾರ ಇಲ್ಲ ಎಂದರೆ ಸರಿ. ದಾವಾ ಆಸ್ತಿಯನ್ನು ಅಳತೆ ಮಾಡಿ ನನಗೆ ಗುರುತಿಸಿ ಕೊಡುವಂತೆ ಕೋರಿ ನಾನು ಪುರಸಭೆಯವರಿಗೆ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸದರಿ ಅರ್ಜಿಯನ್ನು ನಾನು 2021 ಮತ್ತು ಅದಕ್ಕಿಂತ ಪೂರ್ವದಲ್ಲಿಯು ಸಹ ಪುರಸಭೆಗೆ ಸಲ್ಲಿಸಿರುತ್ತೇನೆ. ನಾನು ಸಲ್ಲಿಸಿದ್ದ ಸದರಿ ಅರ್ಜಿಯ ಆಧಾರದ ಮೇರೆಗೆ ಪುರಸಭೆಯವರು ದಾವಾ ಆಸ್ತಿಯನ್ನು ಅಳತೆ ಮಾಡಿ ನನಗೆ ಗುರುತಿಸಿ ಕೊಟ್ಟಿರುತ್ತಾರೆ.

6. ಸರ್ವೇ ನಂಬರ್ 119/1 ರಲ್ಲಿ ಖರೀದಿಸಿದ್ದ ಉಳಿದ ನಿವೇಶನದ ಮಾಲೀಕರುಗಳು ತಮ್ಮ ನಿವೇಶನಗಳಲ್ಲಿ ಈಗಾಗಲೇ ಮನೆಯನ್ನು ಕಟ್ಟಿರುವ ಕಾರಣ ಸದರಿ ನಿವೇಶನಗಳಿಗೆ ಪುರಸಭೆಯವರು ಒಳಚರಂಡಿ, ವಿದ್ಯುತ್ ಮತ್ತು ನೀರಿನ ಸಂಪರ್ಕವನ್ನು ನೀಡಿದ್ದು, ದಾವಾ ನಿವೇಶನದಲ್ಲಿ ನಾನು ಮನೆಯನ್ನು ಕಟ್ಟದ ಕಾರಣ ದಾವಾ ನಿವೇಶನಕ್ಕೆ ಪುರಸಭೆಯವರು ಒಳಚರಂಡಿ, ವಿದ್ಯುತ್ ಮತ್ತು ನೀರಿನ ಸಂಪರ್ಕವನ್ನು ನೀಡಿರುವುದಿಲ್ಲ. ಸರ್ವೇ ನಂಬರ್ 119/2 ರ ಆಸ್ತಿಯ ಮೇಲೆ

ನನಗಾಗಲೀ ಅಥವಾ ಪುರಸಭೆಯವರಿಗಾಗಲೀ ಯಾವುದೇ ಹಕ್ಕು ಮತ್ತು ಅಧಿಕಾರ ಇಲ್ಲ ಎಂದರೆ ಸರಿ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**